ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ : ಎಸ್.ಡಬ್ಲ್ಯೂ 227 ಎಸ್.ಎಡಿ 2003 ದಿನಾಂಕ : 7-1-2004 ರಂದು ಒರಿಸ್ಸಾ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಎನ್.ವೈ. ಹನುಮಂತಪ್ಪ ರವರ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿತ್ತು.

ಆ) ಈ ಆಯೋಗವು ದಿ : 28-01-2004 ರಿಂದ 19-3-2004 ರವರೆಗೆ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತ ಹುದ್ದೆ ಖಾಲಿ ಇದೆ.

1) ಆಯೋಗವು ಉದ್ಯೋಗದಲ್ಲಿ ಮೀಸಲಾತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶ ನೀಡುತ್ತಿರುವ ಬಗ್ಗೆ ಪರಿಶೀಲಿಸುವುದು.

2) ಸರ್ಕಾರದ ಮೀಸಲಾತಿ ಮತ್ತು ಇತರೇ ಸೌಲಭ್ಯಗಳು ಯಾವುದಾದರೊಂದು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಉಪಜಾತಿಗೆ ಹೆಚ್ಚಿನ ಸೌಲಭ್ಯಗಳನ್ನು ಅಸಮಾನಾಂತರವಾಗಿ ನೀಡಲಾಗಿದೆಯೇ? ಹಾಗಿದ್ದಲ್ಲಿ

ಎ) ಎಲ್ಲಾ ಸೌಲಭ್ಯಗಳನ್ನು ಸಮಾನಾಂತರವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಎಲ್ಲಾ ಉಪಜಾತಿಗಳಿಗೆ ಹಂಚಿಕೆ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವುದು.

ಬಿ) ಇಂತಹ ವಿಷಯಗಳಲ್ಲಿ ಆಗಿಂದಾಗ್ಗೆ ಉದ್ಭವಿಸುವ ಎಲ್ಲಾ ವಿಷಯಗಳ ಬಗೆಯೂ ಸಹ ಪರಿಶೀಲಿಸುವುದು.

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯೂ 227 ಎಸ್.ಎಡಿ 2003 ದಿ : 07-01-2004 ರಲ್ಲಿ ಆಯೋಗಕ್ಕೆ ಅಧಿಕಾರ ವಹಿಸಿಕೊಂಡ ದಿನದಿಂದ ಮೂರು ತಿಂಗಳ ಅವಧಿಗೆ ವರದಿಯನ್ನು ನೀಡಲು ಅನುಮತಿ ನಿಗದಿಪಡಿಸಿರುತ್ತದೆ.

4677 (5252) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :- ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಸರ್ಕಾರದ ಯಾವ ಯಾವ ಇಲಾಖೆಗೆ ಸಮವಸ್ತ್ರ ಪೂರೈಸಲಾಗುತ್ತಿದೆ;

ಆ) ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಪ್ರಮಾಣದ ಸಮವಸ್ತ್ರ ಪೂರೈಸಲಾಗಿದೆ; ಎಷ್ಟೆಷ್ಟು ವೆಚ್ಚದಲ್ಲಿ ಪೂರೈಸಲಾಗಿದೆ;

ಇ) ಕಳೆದ ಮೂರು ವರ್ಷಗಳ ಅವಧಿಯಲ್ಲಿನ ನಿಗಮದ ಲಾಭ/ನಷ್ಟಗಳ ವಿವರ ನೀಡುವುದು;

ಈ) ಈ ನಿಗಮವನ್ನು ನಷ್ಟದಿಂದ ಲಾಭದತ್ತ ಕೊಂಡೊಯ್ಯಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ? ಎಷ್ಟೆಷ್ಟು ಯೋಜನಾ ವೆಚ್ಚವಾಗಿದೆ;

ಉ) ಇದರಿಂದಾಗಿ ಎಷ್ಟು ಮಂದಿ ನೇಕಾರರಿಗೆ ಪ್ರಯೋಜನವಾಗುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) ಸಾರ್ವಜನಿಕ ಶಿಕ್ಷಣ ಇಲಾಖೆ (ವಿದ್ಯಾವಿಕಾಸ ಯೋಜನೆ), ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ (ಅಗ್ಗ ದರದ ಸೀರೆ ಪಂಚೆ ಯೋಜನೆ), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಪಾಲಿಕೆ (ಶಾಲಾ ಸಮವಸ್ತ್ರ). ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಹಟ್ಟಿ ಚಿನ್ನದ ಗಣಿ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವ ವಿದ್ಯಾ ನಿಲಯ ಮತ್ತು ಕರ್ನಾಟಕ ವಿದ್ಯುತ್ ಕಾರ್ಖಾನೆಗಳಿಗೆ ಬಟ್ಟೆಯನ್ನು ಸರಬರಾಜು ಮಾಡಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ನಿಗಮವು ಸರಬರಾಜು ಮಾಡಿದ ಬಟ್ಟೆ ಮತ್ತು ಇಲಾಖೆ ವಿವರ :

1. <u>ಸಾರ್ವಜನಿಕ ಶಿಕ್ಷಣ ಇಲಾಖೆ (ಶಾಲಾ ಸಮವಸ್ತ್ರಗಳು)</u> :

2002–2003 – 38.02 ಲಕ್ಷ ಸೆಟ್‌ಗಳು, ರೂ. 34.53 ಕೋಟಿ.

2003–04 – 49.98 ಲಕ್ಷ ಸೆಟ್‌ಗಳು, ರೂ.47.14 ಕೋಟಿ.

2004–05 – 35.21 ಲಕ್ಷ ಸೆಟ್‌ಗಳು, ರೂ. 33.57 ಕೋಟಿ.

2. <u>ಅಗ್ಗದರದ ಸೀರೆ ಪಂಚೆ ಯೋಜನೆ</u> :

2002–03 ರೂ. 4.05 ಕೋಟಿ

2003–04 ರೂ. 5.89 ಕೋಟಿ

2004–05 ರೂ. 3.60 ಕೋಟಿ

3. <u>ಸರ್ಕಾರ/ಇತರೆ ಇಲಾಖೆಗಳು (ವಿವರ ಲಗತ್ತಿಸಲಾಗಿದೆ)</u>

2002–03 ರೂ. 4.12 ಕೋಟಿ

2003–04 ರೂ. 4.03 ಕೋಟಿ

2004–05 ರೂ. 9.43 ಕೋಟಿ

ಇ) 2001–02ನೇ ಸಾಲಿಗೆ ರೂ. 1180.75 ಲಕ್ಷ ನಷ್ಟ

2002–03ನೇ ಸಾಲಿಗೆ ರೂ. 1482.58 ಲಕ್ಷ ನಷ್ಟ

2003–04ನೇ ಸಾಲಿಗೆ ರೂ. 338.98 ಲಕ್ಷ ನಷ್ಟ

ಈ) ಸದರಿ ನಿಗಮಕ್ಕೆ ಈಗಾಗಲೇ ರಾಜ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ ಸಮವಸ್ತ್ರ ಸರಬರಾಜು ಮಾಡುವ ವಿದ್ಯಾ ವಿಕಾಸ ಯೋಜನೆ ಮತ್ತು ಅಗ್ಗ ದರದ ಸೀರೆ ಮತ್ತು ಪಂಚೆ ಯೋಜನೆಯನ್ನು ವಹಿಸಿದ್ದು, ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸಲು 270 ನೌಕರರುಗಳಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಘೋಷಿಸಲಾಗಿದೆ. ಇದಕ್ಕಾಗಿ ಸರ್ಕಾರವು ರೂ.14.00 ಕೋಟಿ ಮೊತ್ತವನ್ನು ಸಾಲದ ರೂಪದಲ್ಲಿ ಮಂಜೂರು ಮಾಡಲು ಅನುಮೋದನೆ ನೀಡಿದೆ. ಸದರಿ ನೌಕರರಿಗೆ ನೀಡಬೇಕಾದ ಆರ್ಥಿಕ ಸೌಲಭ್ಯಕ್ಕಾಗಿ ರೂ.7.00 ಕೋಟಿ ಮೊತ್ತವನ್ನು ಈಗಾಗಲೇ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ. ಉಳಿದಿರುವ ನೌಕರರುಗಳನ್ನೂ ಸಹ ಈಗಾಗಲೇ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿಗೊಳಿಸಿದ್ದು, ಆ ಸಂಬಂಧ ರೂ. 7.00 ಕೋಟಿಗಳನ್ನು ಬಿಡುಗಡೆ ಮಾಡಲು ಕ್ರಮ ವಹಿಸಿದೆ.

ನಿಗಮದ ಪುನಃಶ್ಚೇತನಕ್ಕಾಗಿ ಕೇಂದ್ರ ಸರ್ಕಾರದ ದೀನ್ ದಯಾಳ್ ಹತ್‌ಕರ್ಗಾ ಪ್ರೋತ್ಸಾಹನ ಯೋಜನೆಯಡಿ ರೂ.40.00 ಕೋಟಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೂ.40.00 ಕೋಟಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮಪಾಲಾಗಿ ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲು ಅನುಮೋದಿಸಲಾಗಿದೆ. ಇದರಡಿ ರಾಜ್ಯ ಪಾಲು ರೂ.5.00 ಕೋಟಿಗಳನ್ನು 2004–05ನೇ ಸಾಲಿಗೆ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರವೂ ಸಹ ರೂ.10.00 ಕೋಟಿಗಳನ್ನು ಮಾರ್ಜಿನ್ ಮನಿ ರೂಪದಲ್ಲಿ ಬಿಡುಗಡೆ ಮಾಡಿರುತ್ತದೆ. ಇದಲ್ಲದೆ, ಕೆ.ಹೆಚ್.ಡಿ.ಸಿ. ನೇಕಾರರಿಗೆ ಕಚ್ಚಾಮಾಲು ಖರೀದಿಗೆ ರೂ.1.00 ಕೋಟಿಯನ್ನೂ ಸಹ ಬಿಡುಗಡೆ ಮಾಡಲಾಗಿದೆ.

ಉ) ನಿಗಮವು ನಷ್ಟದಿಂದ ಲಾಭದತ್ತ ನಡೆದಿದ್ದು, ಇದರಿಂದ ನಿಗಮದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 15000 ಕೈಮಗ್ಗ ನೇಕಾರರಿಗೆ ಸತತ ಉದ್ಯೋಗವನ್ನು ನೀಡಲು ಸಾಧ್ಯವಾಗುವುದು.

4678 (5263) ಶ್ರೀ ಶಿವಾನಂದ ನಾಯಕ (ಭಟ್ಕಳ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ಮತ್ತು ಭಟ್ಕಳ್ ತಾಲ್ಲೂಕಿನ ಗೇರಸೊಪ್ಪ ಮತ್ತು ಮುರುಡೇಶ್ವರದಲ್ಲಿ ಸರ್ಕಾರದ ಬಾಲಕರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆಯೇ;